ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 10.

ಬೆಂಗಳೂರು, ಗುರುವಾರ, ಮಾರ್ಚಿ ತಾ|| 10, ಸ್ ೧೯೦೪.

IIನೆ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ವಿದ್ಯಾಭ್ಯಾಸದ ಇಲಾಖಾ.

ಉಪಾಧ್ಯಾಯ ನಿರ್ಣಯ ಪತ್ರಿಕಾ ಪರೀಕ್ಷೆಗಳು.

ಸ್ ೧೯೦೪ನೆ ಇಸವಿ ಮಾರ್ಚ್ 4ನೆ ತಾರೀಖಿನ ಡಿ. ನಂಬರ್ 49.

ಉಪಾಧ್ಯಾಯ ನಿರ್ಣಯ ಪತ್ರಿಕೆಗಳ ಅಪ್ಪರ್ ಸೆಕಂಡರಿ ಲೋವರ್ ಸೆಕಂಡರಿ ಮತ್ತು ಪ್ರೈಮರಿ ಅಂತಸ್ತುಗಳ ಬರಹ ಪರೀಕ್ಷೆಯು (Written Examination) ಸ್ ೧೯೦೪ನೆ ಇಸವಿ ಜುಲೈ ತಿಂಗಳ ತಾರೀಖು 4ನೆ ಸೋಮವಾರ ಮತ್ತು 5ನೆ ಮಂಗಳವಾರ ಈ ದಿವಸಗಳಲ್ಲಿ ಮೈಸೂರಲ್ಲಿ ಕೆಳರಡಿ ಕೆಂಪ್ ಕಾಲಕ್ಕಮವಾಗಿ ನಡೆಯಿಸಲ್ಪಡುವದು :—

ದಿವಸ.	ಕಾಲ.	ಅಪ್ಪರ್ ಸೆಕಂಡರಿ ಅಂತಸ್ತಿನ ವಿಷಯಗಳು.	ಕಾಲ.	ಲೋವರ್ ಸೆಕಂಡರಿ ಅಂತಸ್ತಿನ ವಿಷಯಗಳು.	ಕಾಲ.	ಪ್ರೈಮರಿ ಅಂತಸ್ತಿನ ವಿಷಯಗಳು.
ಮೊದಲನೆಯ ದಿವಸ	10ರಿಂದ 1ರ ವರಿಗೆ.	(1) ಲೋವರ್ ಸೆಕಂಡರಿ ಮತ್ತು ಪ್ರೈಮರಿ ಸ್ಕೂಲ್‌ಗಳಲ್ಲಿ ಓದಬೇಕಾದ ವಿಷಯಗಳನ್ನು ಕಲಿಸುವ ಶಾಸ್ತ್ರ ಮತ್ತು ಅನುಭವ (The theory and practice of teaching) ಸಾಮಾನ್ಯವಾಗಿ ಮುಖತಃ ಬೋಧಿಸುವ ಪದ್ಧತಿಯು (The art of oral teaching) ಯಾವದಾದರೂ ಒಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ (Notes of a lesson on a given subject)	10ರಿಂದ 1ರ ವರಿಗೆ.	(1) ಅಪ್ಪರ್ ಪ್ರೈಮರಿ ಸ್ಕೂಲ್‌ಗಳಲ್ಲಿ ಓದಬೇಕಾದ ವಿಷಯಗಳನ್ನು ಕಲಿಸುವ ಕ್ರಮಗಳು, ಸಾಮಾನ್ಯವಾಗಿ ಮುಖತಃ ಬೋಧಿಸುವ ಪದ್ಧತಿಯು ಮತ್ತು ಯಾವದಾದರೂ ಒಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ.	10ರಿಂದ 12ರ ವರಿಗೆ	(1) ಸಾಮಾನ್ಯವಾಗಿ ಮುಖತಃ ಬೋಧಿಸುವ ಪದ್ಧತಿಯು ಮತ್ತು ಯಾವದಾದರೂ ಒಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ.
	2ರಿಂದ 5ರ ವರಿಗೆ.	(2)(a) ಲೋವರ್ ಸೆಕಂಡರಿ ಮತ್ತು ಪ್ರೈಮರಿ ಸ್ಕೂಲ್‌ಗಳ ಸಂವಿಧಾನ (Organization) ಸ್ಕೂಲ್ ರಿಜಿಸ್ಟರ್‌ಗಳ ಮಾದರಿ, ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಕ್ಕಗಳನ್ನು ತಯಾರ್ಮಾಡುವ ರೀತಿ ಮತ್ತು ಸರ್ಕಾರೀ ಕಾಗದಗಳನ್ನು ಬರೆಯುವ ಸರಿಯಾದ ಕ್ರಮ.	2ರಿಂದ 5ರ ವರಿಗೆ	(2) ಯಾವದಾದರೂ ಒಂದು ಪ್ರೈಮರಿ ಸ್ಕೂಲಿನ ಸಂವಿಧಾನ (Organization) ಮತ್ತು ವ್ಯವಸ್ಥೆ (Discipline) ಸ್ಕೂಲ್ ರಿಜಿಸ್ಟರುಗಳ ಮಾದರಿ, ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಕ್ಕಗಳನ್ನು ತಯಾರ್ಮಾಡುವ ರೀತಿ.	2ರಿಂದ 4ರ ವರಿಗೆ	(2) ಸ್ಕೂಲ್ ರಿಜಿಸ್ಟರುಗಳ ಮಾದರಿ, ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಕ್ಕಗಳನ್ನು ತಯಾರ್ಮಾಡುವ ರೀತಿ
2ನೆಯ ದಿವಸ	10 ರಿಂದ 12ರ ವರಿಗೆ	(2) (b) ನೀತ್ಯನುಶಾಸನ ವಿಧಾನ (Principles of moral discipline) ಶೀಲಸ್ವಭಾವೋತ್ಪಾದನ (Formation of habits and character)				

ಪಂಡೊಂದು ಪತ್ರಿಕೆಗೂ ಕಿಪ್ಪ ಮಾಡಿರುವ ಪೂರ್ಣಾಂಕದಲ್ಲಿ ಶೇಕಡಾ 40ಕ್ಕೆ ಕಡಮೆ ಇಲ್ಲದೆ ಅಂಕಗಳನ್ನು ಪಡೆಯದವರು ಪರೀಕ್ಷೆಯಲ್ಲಿ ತೇರ್ಗಡೆಯಾಗಿದೆ ಭಾವಿಸಲ್ಪಡುವದಿಲ್ಲ. ತೇರ್ಗಡೆಯಾದವರಲ್ಲಿ, ಒಟ್ಟು ಅಂಕ ಸಂಖ್ಯೆಯಲ್ಲಿ ಶೇಕಡಾ 60ನ್ನು ಪಡೆದವರು ಸೂಪರ್ನೇ ವರ್ಗದಲ್ಲಿಯೂ ಉಳಿದವರು ಎರಡನೇ ವರ್ಗದಲ್ಲಿಯೂ ಸೇರಿಸಲ್ಪಡುವರು.

ಬರಹ ಪರೀಕ್ಷೆಗಳ ಫಲಿತಾಂಶವು 1904ನೆ ಇಸವಿ ಜೂಲೈ ತಿಂಗಳು 13ನೆ ತಾರೀಖನ್ನು ಅತಿಕ್ರಮಿಸದೆ ಪ್ರಕಟಿಸಲ್ಪಡುತ್ತದೆ.

ವ್ಯವಹಾರಿಕ ಪರೀಕ್ಷೆಯು (Practical test) 1904ನೆ ಇಸವಿ ಜೂಲೈ ತಿಂಗಳು 18ನೆ ತಾರೀಖಿನಲ್ಲಿಯೂ ಮುಂದಿನ ದಿವಸಗಳಲ್ಲಿಯೂ ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ನಡೆಯಿಸಲ್ಪಡುವದು.

ಬರಹ ಪರೀಕ್ಷೆಯಲ್ಲಿ ತೇರ್ಗಡೆಯಾಗದವರನ್ನು ವ್ಯವಹಾರಿಕ ಪರೀಕ್ಷೆಗೆ ಸೇರಿಸುವದಿಲ್ಲ.

ಇದರಡಿ ಕಂಡ ನಿಬಂಧನೆಗಳಿಗೆ ಪರೀಕ್ಷ್ಯರು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು :—

(1) ಪರೀಕ್ಷೆಯು ಆರಂಭಿಸುವದಕ್ಕೆ ನ್ಯಸ್ತವಾದ ಕಾಲ ಮೊದಲು ಅರ್ಧ ಘಂಟೆ ಆಗುವ ವರೆಗೂ ಪರೀಕ್ಷಾ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ಪರೀಕ್ಷ್ಯನಿಗೂ ಅಪ್ಪಣೆ ಕೊಡಲ್ಪಡುವದಿಲ್ಲವು. ಮತ್ತು ಅಂಥಾ ಅರ್ಧ ಘಂಟೆ ಕಳದಮೇಲೆ ಬರುವ ಯಾವ ಪರೀಕ್ಷ್ಯರಿಗೂ ಪ್ರವೇಶಕ್ಕೆ ಅವಕಾಶ ಹುಟ್ಟಲಾರದು.

(2) ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷಾ ಕೊಠಡಿಯನ್ನು ಬಂದಾವರ್ತಿ ಬಿಟ್ಟು ಬಂದ ನಂತರ ಪುನಹ ಪ್ರವೇಶಿಸಲು ಯಾವ ಪರೀಕ್ಷ್ಯನಿಗೂ ಅವಕಾಶ ಆಗಂಟುಗಲಾರದು. ಅಲ್ಲದೆ ತನ್ನ ಉತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟ ನಿಜಹ ಪರೀಕ್ಷಾ ಸ್ಥಳವನ್ನು ಬಿಟ್ಟು ಬರುವದಕ್ಕೆ ಸಹ ಅವಕಾಶ ಕೊಡುವದಿಲ್ಲವು.

(3) ಯಾವ ಪರೀಕ್ಷ್ಯನೇ ಆಗಲಿ ಮತ್ತೊಬ್ಬ ಪರೀಕ್ಷ್ಯನೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ಯಾವ ವಿಧ ಮಿಂದಲಾದರೂ ಒಳಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ಪರೀಕ್ಷ್ಯನು ಕೂಡ್ಲೆ ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರಿ ಸಂಗತಿಯು ಇನ್ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ತಿಳಿಸಲ್ಪಡುವದು.

(4) ಪರೀಕ್ಷಾ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ, ಪುಸ್ತಕಗಳನ್ನಾಗಲಿ, ಬರದ ಕಾಗದಗಳನ್ನಾಗಲಿ, ಅಥವಾ ಇನ್ಯಾವ ವಿಧವಾದ ಕಾಗದ ಪತ್ರವನ್ನಾಗಲಿ, ತೆಗದುಕೊಂಡು ಹೋಗಲು ಯಾವ ಪರೀಕ್ಷ್ಯನಿಗೂ ಯಾವ ಸಂದರ್ಭದಲ್ಲಿಯೂ ಅವಕಾಶ ಕೊಡಲ್ಪಡುವದಿಲ್ಲವು. ಯಾವ ಪರೀಕ್ಷ್ಯನಾಗಲಿ, ಈ ನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿರುವದಾಗಿಯಾಗಲಿ ಅಥವಾ ಇನ್ಯಾವ ಅಕೃತ್ಯಗಳನ್ನು ನಡಿಸುತ್ತಿರುವದಾಗಿಯಾಗಲಿ, ಕಂಡು ಹಿಡಿಯಲ್ಪಟ್ಟರೆ ಅಂಥಾ ಪರೀಕ್ಷ್ಯನು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವದನಲ್ಲದೆ ಸದರಿ ನಡವಳಿತವು ಇನ್ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ತಿಳಿಸಲ್ಪಡುವುದು. ಸೂಪರ್ನಿಂಟೆಂಡೆಂಟರವರ ಅಪ್ಪಣೆಯನ್ನು ಪಡೆದು ಪರೀಕ್ಷ್ಯರು ತಮ್ಮ ತಮ್ಮ ರೂಲರುಗಳನ್ನು ಉಪಯೋಗಿಸಬಹುದು.

(5) ಪರೀಕ್ಷ್ಯನು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರ್ನಿಟೆಂಡೆಂಟರು ಕಾಗದಗಳನ್ನು ತೆಗದುಕೊಳ್ಳುವ ವರಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ಪರೀಕ್ಷ್ಯನೇ ಆಗಲಿ ಮೇಲೆ ಹೇಳಿದ ರೀತಿ ನಡಿಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

(6) ಪರೀಕ್ಷ್ಯನ ಹೆಸರು ರಜಿಸ್ಟರ್ ನಂಬರ್ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

(7) ಪ್ರಶ್ನೆ ಪತ್ರಗಳು ವಿನಃ ಯಾವ ಕಾಗದಗಳನ್ನಾಗಲಿ ಪರೀಕ್ಷಾ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ಪರೀಕ್ಷ್ಯರಿಗೆ ಅಪ್ಪಣೆ ಕೊಡುವದಿಲ್ಲವು.

(8) ಪರೀಕ್ಷ್ಯರು ಕಾಗದಗಳನ್ನು ಹರಿಯದಂತೆಯೂ ಮತ್ತು ನೆಲದಮೇಲೆ ಕಾಗದಗಳನ್ನು ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. ಉಳ್ಳಹೋದ ವಿಶಿಷ್ಟ ಕಾಗದಗಳೂ ಪರೀಕ್ಷ್ಯರು ಬರೆಯುತ್ತಲಿದ್ದ ಮೇಜಿನ ಮೇಲೆಯೇ ಬಿಡಲ್ಪಡಬೇಕು.

ನೋಟಿಫಿಕೇರ್ಷ—ಡಿ. ನಂ. 50.

ತಾರೀಖು 2ನೆ ಮಾಹೆ ಮಾರ್ಚ ಸ್ನ 1904ನೆ ಇಸವಿ.

ಮೈಸೂರು ಸೀಮೆಯ ಶಾಸನದ ಇಲಾಖಾ ಡೈರೆಕ್ಟರವರ ಅಸಿಸ್ಟೆಂಟರು ಮಾ|| ರಾ|| ಆರ್. ನರಸಿಹ್ಮಾಚಾರಿ, ಎಂ. ಎ. ಯವರಿಂದ ರಚಿಸಲ್ಪಟ್ಟ "ನಗೆಗಡಲು" ಎಂಬ ಪುಸ್ತಕವು ವರ್ನಾಕ್ಯುಲರ್ ಮತ್ತು ಆಂಗ್ಲೋ ವರ್ನಾಕ್ಯುಲರ್ ಮಿಡಲ್ ಸ್ಕೂಲುಗಳಿಗೋಸ್ಕರ ಬಹುಮಾನ ಪುಸ್ತಕವಾಗಿ ನಿರ್ಣಯಿಸಲ್ಪಟ್ಟಿರುತ್ತೆ. ಇದರ ಕ್ರಯವು ಪ್ರತಿಯೊಂದಕ್ಕೆ ೫ ಆಣೆಗಳು. ಇದನ್ನು ಗ್ರಂಥಕರ್ತರಿಂದ ಕ್ರಯಕ್ಕೆ ಪಡೆಯಬಹುದು.

ಹೆಚ್. ಜೆ. ಭಾಭಾ,
ಇನ್ಸ್ಪೆಕ್ಟರ್ ಜನರಲ್ ಆಫ್ ಎಜ್ಯುಕೇರ್ಷ.